# ನಗರಸಭೆ ಕಾರ್ಯಾಲಯ, ನಿಪ್ಪಾಣಿ

**ನಸನಿ/ತಾಂತ್ರಿಕ/ಸಕಾಅ/ಟೆಂಡರ/2009-10/** **ದಿನಾಂಕ: 18.02.2010**

## ಟೆಂಡರ್ ಪ್ರಕಟಣೆ

ನಗರಸಭೆ ನಿಪ್ಪಾಣಿಯಿಂದಾ, ನಿಪ್ಪಾಣಿ ವ್ಯಾಪ್ತಿಯಲ್ಲಿ ನಗರ ಸಭೆಯ ಸಾಮಾನ್ಯ ನಿಧಿಯಲ್ಲಿ ಈ ಕೆಳಕಾಣಿಸಿದ ಕೆಲಸಗಳಿಗೆ, ಲೋಕೋಪಯೋಗಿ ಇಲಾಖೆ ಹಾಗೂ ನಗರಸಭೆಯಲ್ಲಿ ನೋಂದಾಯಿಸಿದ ಅರ್ಹ ಗುತ್ತಿಗೆದಾರರಿಂದಾ ಟೆಂಡರ ದರವಾರುಗಳನ್ನು ದ್ವಿಪ್ರತಿಯಲ್ಲಿ ಅವ್ಹಾನಿಸಲಾಗಿದ್ದು, ಟೆಂಡರಗಳ ಲಕೋಟೆಯ ಮೇಲೆ ಕೆಲಸದ ಹೆಸರನ್ನು ನಮೂದಿಸಿದ ಜೊತೆಗೆ ನಿಗದಿಪಡಿಸಿರುವ ಇ.ಎಮ್.ಡಿ. ಹಣವನ್ನು ಧನಾದೇಶ ಅಥವಾ ಕಚೇರಿಯಲ್ಲಿ ಪಾವತಿ ಮಾಡಿದ ನಗದು ರಶೀದಿಯ ನಕಲು ಪ್ರತಿಯನ್ನು ಸೀಲ್ ಮಾಡಿದ ಲಕೋಟೆಯಲ್ಲಿಟ್ಟು ಪೌರಾಯುಕ್ತರು ನಗರಸಭೆ ನಿಪ್ಪಾಣಿ ಇವರ ಕೋತಡಿಯಲ್ಲಿ ಇಟ್ಟ ಟೆಂಡರ ಪಟ್ಟಿಗೆಯಲ್ಲಿ ದಿನಾಂಕ **22.03.2010** ರಂದು **5.00** ಗಂಟೆಯೊಳಗಾಗಿ ಹಾಕಬೇಕು.

| ಅ.ನಂ | ಕಾಮಗಾರಿಯ ಹೆಸರು | ಅಂದಾಜು ಮೊತ್ತ (ರೂ. ಲಕ್ಷ) | ಇ.ಎಮ್. ಡಿ. ಹಣ | ಟೆಂಡರ ಫಾರಂ ಬೆಲೆ+ ಟ್ಯಾಕ್ಸ ರೂ. | ಅವಧಿ |
|---|---|---|---|---|---|
| 1 | ರಿ.ಸ. ನಂ 234/ಅ/2 ನಲ್ಲಿ ಚರ್ಮಕಾರ ಸಮಾಜಕ್ಕೆ ಸಮುದಾಯ ಭವನ್ನು ನಿರ್ಮಿಸುವುದು | 9.85 | 24700 | 1000+10% ಎಸ್.ಟಿ | 12 ತಿಂಗಳು |
| 2 | ಆಶ್ರಯ ನಗರದಲ್ಲಿ ಡಿ.ಪಿ.ಇ.ಪಿ ಶಾಲೆಗೆ, ಬಿ.ಇ.ಓ ಕಛೇರಿಗೆ ಆವರಣ ಗೋಡೆ ನಿರ್ಮಿಸುವುದು | 9.95 | 24900 | 1000+10% ಎಸ್.ಟಿ | 6 ತಿಂಗಳು |

ಟೆಂಡರ್ ಫಾರಂಗೆ ಅರ್ಜಿ ಸಲ್ಲಿಸಲು ಮತ್ತು ಖಾಲಿ ಟೆಂಡರ್ ಫಾರಂಗಳನ್ನು ಪಡೆಯಲು ಕೊನೆಯ ದಿನಾಂಕ: **20.03.2010**

ಭರ್ತಿ ಮಾಡಿ ಸೀಲ್ ಮಾಡಿದ ಟೆಂಡರ ಫಾರ್ಮ ಸಲ್ಲಿಸುವ ಕೊನೆಯ ದಿನಾಂಕ **22.03.2010**.

**ಈ ಕೆಳಕಾಣಿಸಿದ ಷರತ್ತುಗಳು ಮೇಲಿನ ಕಾಮಗಾರಿಗಳಿಗೆ ಅನ್ವಯಿಸುತ್ತವೆ.**

1) ಖಾಲಿ ಟೆಂಡರ್ ಫಾರಂಗಾಗಿ ಮನವಿ ಸಲ್ಲಿಸುವಾಗ ಟೆಂಡರ್ ಫಾರಂ ಬೆಲೆ ಮತ್ತು ಇ.ಎಂ.ಡಿ. ಹಣವನ್ನು ಪೌರಾಯುಕ್ತರರು ನಗರಸಭೆ ನಿಪ್ಪಾಣಿಯವರ ಹೆಸರಿನಲ್ಲಿಯ ಡಿ.ಡಿ. ಅಥವಾ ಕಛೇರಿಯಲ್ಲಿ ನಗದು ಪಾವತಿಸಿದ ರಸೀದಿಯೊಂದಿಗೆ, ಪೌರಾಯುಕ್ತರು, ನಗರಸಭೆ, ನಿಪ್ಪಾಣಿ ರವರ ಹೆಸರಿನಲ್ಲಿ ಕಟ್ಟುವುದು
2) ಖಾಲಿ ಟೆಂಡರ್ ಫಾರಂಗೆ ಕಟ್ಟಿದ ಬೆಲೆಯನ್ನು ಯಾವುದೇ ಕಾರಣಕ್ಕೂ ಹಿಂದಿರುಗಿಸಲಾಗುವುದಿಲ್ಲ.
3) **Government Order No. FD 9 PCL 2004 (II), Bangalore, Dated: 06.8.2005** ರ ಷರತ್ತುಗಳು ಹಾಗೂ ತಿದ್ದುಪಡಿಗಳು ಅನ್ವಯಿಸುತ್ತದೆ
4) ಗುತ್ತಿಗೆದಾರರು ಕಾಮಗಾರಿಯ ಪ್ರಾರಂಭ, ಪ್ರಗತಿ ಹಾಗೂ ಮುಕ್ತಾಯದ ಹಂತದ ಫೋಟೋಗಳನ್ನು ತಮ್ಮ ಸ್ವಂತ ಖರ್ಚಿನಲ್ಲಿ ಕಡ್ಡಾಯವಾಗಿ ಸಲ್ಲಿಸತಕ್ಕದ್ದು,
5) ಟೆಂಡರ್ ಅನುಮೋದಿತ ಗುತ್ತಿಗೆದಾರರು ಕರಾರು ಪತ್ರ ಬರೆದುಕೊಟ್ಟ ಮೂರು ದಿನಗಳ ಒಳಗಾಗಿ ಕಾರ್ಯಾದೇಶವನ್ನು ಪಡೆಯುವುದು. ಮತ್ತು ಕಾರ್ಯಾದೇಶವನ್ನು ನೀಡಿದ ದಿನಾಂಕವೇ ಕಾಮಗಾರಿಯ ಹಸ್ತಾಂತರಿಸಿದ ದಿನಾಂಕವೆಂದು ತಿಳಿಯುವುದು.
6) ಖಾಲಿ ಅರ್ಜಿ ಫಾರಂಗಳಿಗಾಗಿ ಅರ್ಜಿ ಸಲ್ಲಿಸುವಾಗ ಸಂಬಂಧಪಟ್ಟ ದಾಖಲೆಗಳನ್ನು ಸಲ್ಲಿಸದೇ ಇದ್ದಲ್ಲಿ ಅರ್ಜಿಗಳನ್ನು ಸ್ವೀಕರಿಸಲಾಗುವುದಿಲ್ಲ.
7) ಕಾಮಗಾರಿ ಗುಣಮಟ್ಟ ಪರೀಕ್ಷೆ ಪ್ರಮಾಣ ಪತ್ರ ಗುತ್ತಿಗೆದಾರರು ನೀಡುವುದು ಮತ್ತು ಸದರಿ ಕಾಮಗಾರಿಗಳನ್ನು 3ನೇ ಸಂಸ್ಥೆಯಿಂದ ತಪಾಸಣೆಗೆ ಒಳಪಡಿಸಿ ವರದಿ ನಿಡಿದ ನಂತರ ಬಿಲ್ಲನ್ನು ಪಾವತಿಸಲಾಗುವುದು
8) ಕಾಮಗಾರಿ ಪೂರ್ಣಗೊಂಡ ದಿನಾಂಕದಿಂದ ಕಾಮಗಾರಿ ನಿರ್ವಹಣೆಯನ್ನು ಎರಡು ವರ್ಷ ಅವಧಿಗೆ ಗುತ್ತಿಗೆದಾರರೇ ತಮ್ಮ ಸ್ವಂತ ಖರ್ಚಿನಲ್ಲಿ ನಿರ್ವಹಿಸತಕ್ಕದ್ದು.
9) ಟೆಂಡರಗೆ ಸಂಬಂಧಪಟ್ಟ ಹೆಚ್ಚಿನ ವಿವರಗಳಿಗೆ ಕಛೇರಿಯ ವೇಳೆಯಲ್ಲಿ ಸಂಬಂಧಪಟ್ಟ ಅಧಿಕಾರಿಗಳನ್ನು ಸಂಪರ್ಕಿಸುವುದು,
10) ಯಾವುದೇ ಕಾರಣ ನೀಡದೆ ದರಪಟ್ಟಿಯನ್ನು ತಿರಸ್ಕರಿಸುವ ಅಥವಾ ಯಾವುದೇ ಕ್ಷಣದಲ್ಲಾದರೂ ರದ್ದು ಪಡಿಸುವ ಅಥವಾ ಟೆಂಡರ್‌ಗೆ ಸಂಬಂಧಪಟ್ಟ ಎಲ್ಲಾ ರೀತಿಯ ಹಕ್ಕುಗಳನ್ನು ಈ ಕೆಳಗೆ ಸಹಿ ಮಾಡಿರುವ ಅಧಿಕಾರಿಗಳು ಕಾಯ್ದಿರಿಸಿಕೊಂಡಿರುತ್ತಾರೆ
11) ಸಾಧ್ಯವಾದಲ್ಲಿ ಅದೆ ದಿನ ಭರ್ತಿ ಮಾಡಿ ಸಲ್ಲಿಸಿದ ಟೆಂಡರಗಳನ್ನು ಟೆಂಡರ ಸಲ್ಲಿಸುವ ಕೊನೆಯ ದಿನಾಂಕ ಹಾಗೂ ಸಮಯದ ನಂತರ ತೆರೆಯಲಾಗುವುದು

**(ಕೆಂಪಹನುಮಯ್ಯ)**
**ಪೌರಾಯುಕ್ತರು**
**ನಗರಸಭೆ ನಿಪ್ಪಾಣಿ**

**(ಶುಭಾಂಗಿ ಸು. ಜೋಶಿ)**
**ಅಧ್ಯಕ್ಷರು**
**ನಗರಸಭೆ ನಿಪ್ಪಾಣಿ**